| | | | | |
|---|---|---|---|---|
| 8. | ಕೆ.ಸಿ.ಟಿ. ಮಿಲ್ | 0.30 | 0.282 | ನೆಲಹಾಸು ಕೆಲಸ ಮುಗಿದಿದೆ |
| 9. | ಮಾರುತಿ ನಗರ ಹೆಗ್ಗೇರಿ | 1.30 | 0.419 | ಕೊಳವೆ ಬಾವಿ ಕೆಲಸ ಮುಗಿದಿದೆ |
| | ಒಟ್ಟು | 5.975 | 3.989 | |

**ಹುಬ್ಬಳ್ಳಿ ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು**

1225 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಹುಬ್ಬಳ್ಳಿ ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಎಷ್ಟು;*

*ಆ) ಹುಬ್ಬಳ್ಳಿ -ಧಾರವಾಡ ಮಹಾನಗರಸಭೆಯ ನಿಯಂತ್ರಣದಲ್ಲಿರುವ ಒಟ್ಟು ರಸ್ತೆ ಎಷ್ಟು; ಅವುಗಳಲ್ಲಿ ಡಾಂಬರೀಕರಣ ಮಾಡಬೇಕಾಗಿರುವ ರಸ್ತೆ ಎಷ್ಟು?*

*ಇ) ಡಾಂಬರೀಕರಣ ಮಾಡಲು ಉದ್ದೇಶಿಸಿರುವ ರಸ್ತೆಗಳು ಎಷ್ಟು ಹಾಗೂ ಯಾವಾಗ ಮಾಡಿಸಲಾಗುವುದು?*

ಶ್ರೀ ವೈಜನಾಥ್ ಪಾಟೀಲ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) 15 (ಹದಿನೈದು) ರಸ್ತೆಗಳು

ಆ) 3515 ರಸ್ತೆಗಳು

ಇ) 114 ರಸ್ತೆಗಳನ್ನು ಡಾಂಬರೀಕರಣ ಮಾಡಲು ಉದ್ದೇಶಿಸಲಾಗಿದೆ. ಹಣಕಾಸಿನ ಅವಕಾಶ ಪರಿಗಣಿಸಿ ಹಂತ ಹಂತವಾಗಿ ಪ್ರಸ್ತುತ ಸಾಲಿನ ಮಳೆಗಾಲದ ನಂತರ ಕೈಗೆತ್ತಿಕೊಳ್ಳಲಾಗುವುದು.

**ವಿಜಾಪುರ ನಗರದಲ್ಲಿ ರಿಂಗ್ ರಸ್ತೆ**

1864 - ಶ್ರೀ ಬಸನಗೌಡ ಆರ್. ಪಾಟೀಲ್ (ವಿಜಾಪುರ) : ಮಾನ್ಯ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ವಿಜಾಪುರ ನಗರದಲ್ಲಿ ರಿಂಗ್ ರಸ್ತೆ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

*ಆ) ಇದ್ದಲ್ಲಿ ಯಾವ ಪ್ರದೇಶಗಳಲ್ಲಿ ಹಾದು ಹೋಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು)?*

*ಇ) ಎಷ್ಟು ದಿವಸಗಳಲ್ಲಿ ಈ ಕೆಲಸ ಮಾಡಲಾಗುವುದು?*

ಶ್ರೀ ವೈಜನಾಥ್ ಪಾಟೀಲ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಹೌದು.

• ಆ) ಈ ರಸ್ತೆಯು ವಿಜಾಪುರ ಧಾರವಾಡ ರಸ್ತೆ ಮುಖಾಂತರ ಹಾದು ಹೊಸದಾಗಿ ಕಟ್ಟಿದ ಆಕಾಶವಾಣಿ ಕೇಂದ್ರ ಹಾಗೂ ರಾಷ್ಟ್ರೀಯ ಹೆದ್ದಾರಿ ನಂ. 13 (ಸೊಲ್ಲಾಪುರ) ರಲ್ಲಿ ಸೇರುತ್ತದೆ. ಸದರಿ ವ್ಯಾಪ್ತಿಯಲ್ಲಿ ಈ ಕೆಳಕಾಣಿಸಿದ ಸರ್ವೆ ನಂಬರ್‌ಗಳನ್ನು ಒಳಗೊಂಡಿರುತ್ತದೆ.

650, 645, 648, 585, 646,656,644, 643, 687, 686, 684, 683, 740, 741, 742, 743, 838, 923, 151, 150ಎ, 150ಬಿ, 897, 60, 61 ಮತ್ತು 62.

ಇ) ಈ ಕೆಲಸ ಪೂರ್ಣಗೊಳಿಸಲು ಕನಿಷ್ಟ ಎರಡು ವರ್ಷಗಳ ಅವಧಿ ಬೇಕಾಗುತ್ತದೆ.

**ಹುಬ್ಬಳ್ಳಿ-ಧಾರವಾಡದಲ್ಲಿ ಸಾರ್ವಜನಿಕರಿಗೆ ವಿಶ್ರಾಂತಿ ತಾಣ ನಿರ್ಮಾಣ**

931 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ರಾಮಾಪುರ ಅಥವಾ ಪುತ್ತೂರು ಗುಡ್ಡಗಳಲ್ಲಿ ನಗರದ ಚಿಕ್ಕ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ವಿಶ್ರಾಂತಿ ತಾಣ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೆ?*

*ಆ) ಇದ್ದರೆ ಯೋಜನೆಯ ರೂಪರೇಷೆಗಳು ಏನು?*

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಇಂತಹ ಯೋಜನೆ ಅರಣ್ಯ ಇಲಾಖೆಯಲ್ಲಿ ಇರುವುದಿಲ್ಲ. ಉದ್ಯಾನವನ ನಿರ್ಮಿಸುವ ವಿಷಯವು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿರುತ್ತದೆ. ಆದರೆ ರಾಮಾಪುರ ಅಥವಾ ಸತ್ತೂರು ಗುಡ್ಡಗಳು ಅರಣ್ಯ ಪ್ರದೇಶವಾಗಿರುವುದರಿಂದ ಅದನ್ನು ಬಿಡುಗಡೆ ಮಾಡಲು ತೋಟಗಾರಿಕೆ ಇಲಾಖೆಯಿಂದ ಬೇಡಿಕೆ ಬಂದಲ್ಲಿ ನಿಯಮಾನುಸಾರ ಪರಿಶೀಲಿಸಲಾಗುವುದು.

ಆ) ಉದ್ಭವಿಸುವುದಿಲ್ಲ

**ಹುಬ್ಬಳ್ಳಿ - ಧಾರವಾಡ ಮಹಾನಗರದ ಅಭಿವೃದ್ಧಿಗೆ ಖರ್ಚಾದ ಹಣ**

929 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಹುಬ್ಬಳ್ಳಿ -ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ 1990-91ನೇ ಸಾಲಿನಿಂದ ಇಲ್ಲಿಯವರೆಗೆ ಮಹಾನಗರ ಅಭಿವೃದ್ಧಿ ಸಲುವಾಗಿ ಖರ್ಚು ಮಾಡಿದ ಹಣ ಎಷ್ಟು?*

*ಆ) ಯಾವ ಯಾವ ಕೆಲಸದ ಸಲುವಾಗಿ ಖರ್ಚು ಮಾಡಲಾಗಿದೆ ಅದರ ಸಂಪೂರ್ಣ ವಿವರ ಒದಗಿಸುವುದು.*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) 1990-91 ರಿಂದ 1994-95ರ ಕೊನೆಯವರೆಗೆ ಪ್ರಾಧಿಕಾರ ಮಹಾನಗರದ ಅಭಿವೃದ್ಧಿಗಾಗಿ ಮಾಡಿದ ಖರ್ಚಿನ ವಿವರಗಳು ಈ ಕೆಳಗಿನಂತಿದೆ.

| | | |
|---|---|---|
| 1) | 1990-91 | ಇಲ್ಲ |
| 2) | 1991-92 | ಇಲ್ಲ |
| 3) | 1992-93 | 31.37 ಲಕ್ಷ |
| 4) | 1993-94 | 44.71 ಲಕ್ಷ |
| 5) | 1994-95 | 36.18 ಲಕ್ಷ |
| | ಒಟ್ಟು | 112.26 ಲಕ್ಷ |

ಆ) ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿಯ ಸ್ಮಶಾನ, ಉದ್ಯಾನ, ವೃತ್ತ ಹಾಗೂ ಕಟ್ಟಡಗಳಿಗೆ ಪ್ರತಿ ವರ್ಷ ಮಾಡಲಾದ ವೆಚ್ಚದ ವಿವರಗಳನ್ನು ಅನುಬಂಧ ಎ ಮತ್ತು ಬಿರಲ್ಲಿ ನೀಡಲಾಗಿದೆ.